ಪ್ರಶ್ನೆ ಸಂಖ್ಯೆ : 420 (4435)
(ಮಾನ್ಯ ಸದಸ್ಯರ ಪ್ರಶ್ನೆಯನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ)

ಅಧ್ಯಕ್ಷರು : ಮಾನ್ಯ ರವಿಯವರೇ, ನಿಮ್ಮ ಪ್ರಶ್ನೆಯನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದೆ. ಅರಣ್ಯ ಇಲಾಖೆ ಮಂತ್ರಿಗಳಿಂದ ಮುಂದಿನವಾರ ಅಂದರೆ ಮಂಗಳವಾರ ಅವರ ಪ್ರಶ್ನೆಗಳು ಇವೆ ಅವತ್ತು ಉತ್ತರ ಕೊಡಿಸೋಣ.

ಬೆಂಗಳೂರು ನಗರದಲ್ಲಿ ಧರಣಿ ಮುಷ್ಕರ, ಮೆರವಣಿಗೆಗಳಿಂದ ಟ್ರಾಫಿಕ್ ಜಾಮ್

409 (4945) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಧರಣಿ, ಮುಷ್ಕರ, ಮೆರವಣಿಗೆ ಮುಂತಾದ ಕಾರಣಗಳಿಂದ ಪ್ರತಿನಿತ್ಯ ಟ್ರಾಫಿಕ್‌ಜಾಮ್ ಆಗಿ ನಗರದ ಜನತೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಟ್ರಾಫಿಕ್ ಜಾಮ್‌ನಿಂದಾಗಿ ಅಧಿಕವಾಗುತ್ತಿರುವ ವಾಯುಮಾಲಿನ್ಯ ಹಾಗೂ ತತ್ಪರಿಣಾಮವಾಗಿ ಅಸ್ತಮ ಮುಂತಾದ ಅಲರ್ಜಿಕಾರಕ ರೋಗಗಳು ಹೆಚ್ಚುತ್ತಿರುವುದು ನಿಜವಲ್ಲವೆ?

ಇ) ಈ ರೀತಿ ಧರಣಿ, ಸತ್ಯಾಗ್ರಹ ನಡೆಸುವವರಿಗೆ ನಗರದಿಂದ 20 ಕಿ.ಮಿ. ಆಚೆ ಒಂದು ಮೈದಾನವನ್ನು ಅಭಿವೃದ್ಧಿಪಡಿಸಿ, ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದರಿಂದ ಟ್ರಾಫಿಕ್ ಜಾಮ್ ತೊಂದರೆ ಕಡಿಮೆಯಾಗುವುದಿಲ್ಲವೆ?

ಈ) ಹಾಗಿದ್ದಲ್ಲಿ ನಗರದ 20 ಕಿ.ಮಿ. ವ್ಯಾಪ್ತಿಯಲ್ಲಿ ಧರಣಿ, ಮುಷ್ಕರ, ಮೆರವಣಿಗೆ ಇತ್ಯಾದಿಗಳನ್ನು ನಿಷೇಧಿಸಲು ಸರ್ಕಾರ ಕಾನೂನನ್ನು ರೂಪಿಸುವುದೇ?

ಉ) ಈ ಬಗ್ಗೆ ಸರ್ಕಾರದ ಮುಂದಿರುವ ಕಾರ್ಯಯೋಜನೆಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಶಾಂತವಾದ ರೀತಿಯಲ್ಲಿ ಧರಣಿ ಮತ್ತು ಮುಷ್ಕರ ನಡೆಸುವುದು ಪ್ರಜಾತಂತ್ರದ ಒಂದು ಅವಿಭಾಜ್ಯ ಅಂಶ. ಆದರೆ ಈ ಧರಣಿ ಮತ್ತು ಮುಷ್ಕರಗಳನ್ನು ಎಲ್ಲೆಂದರೆ ಅಲ್ಲಿ ನಡೆಸುವಂತಿಲ್ಲ. ಧರಣಿ ಮತ್ತು ಮುಷ್ಕರವನ್ನು ನಡೆಸುವವರು ಪೊಲೀಸ್ ಆಯುಕ್ತರ ನಿರ್ದಿಷ್ಟ ಅನುಮತಿಯನ್ನು ಪಡೆಯಬೇಕಾಗಿದೆ. ಅನುಮತಿ ಪಡೆಯಲು ಬೇಡಿಕೆ ಬಂದಾಗ ಅದನ್ನು ಪರಿಶೀಲಿಸಿ ಸಂಚಾರ ಮತ್ತು ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಉಂಟಾಗದಂತೆ ನಿರ್ದಿಷ್ಟ ರಸ್ತೆ ಮೂಲಕ ಹಾದು ಬರುವಂತೆ ಅನುಮತಿಯನ್ನು ಪೊಲೀಸ್ ಆಯುಕ್ತರು ನೀಡುವರು.

ಆ) ಧರಣಿ ಮತ್ತು ಮುಷ್ಕರ ಹೂಡಲು ಅನುಮತಿ ನೀಡುವಾಗ ಪೊಲೀಸ್ ಆಯುಕ್ತರು ಸಾರ್ವಜನಿಕರಿಗೆ ಕನಿಷ್ಟ ರೀತಿಯಲ್ಲಿ ತೊಂದರೆ ಉಂಟಾಗುವ ಬಗ್ಗೆ ಪರಿಶೀಲಿಸಿ ಅನುಮತಿ ನೀಡಲು ಕ್ರಮವಹಿಸುವರು. ಮತ್ತು ವಿನಾಕಾರಣ ಟ್ರಾಫಿಕ್ ಜಾಮ್ ಆಗದಂತೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವರು.

ಇ) ಯಾವ ಸ್ಥಳದಲ್ಲಿ ಧರಣಿ ಮತ್ತು ಮುಷ್ಕರವನ್ನು ನಡೆಸಲು ಅನುಮತಿ ನೀಡಬೇಕು. ಹಾಗೂ ಯಾವ ರೀತಿ ಬಂದೋಬಸ್ತ್ ಮಾಡಬೇಕೆಂಬುದನ್ನು ಪೊಲೀಸ್ ಆಯುಕ್ತರು ನಿರ್ಧರಿಸುತ್ತಾರೆ. ನಿರ್ದಿಷ್ಟ ಮೈದಾನವನ್ನು ಧರಣಿ ಮತ್ತು ಮುಷ್ಕರಕ್ಕೋಸ್ಕರ ನಿಗದಿಪಡಿಸಲು ಪೊಲೀಸ್ ಆಯುಕ್ತರು ಸರ್ಕಾರವನ್ನು ಕೋರಿದ್ದು, ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) 'ಇ' ನಲ್ಲಿ ವಿವರಿಸಿದಂತೆ

ಉ) 'ಇ' ನಲ್ಲಿ ವಿವರಿಸಿದಂತೆ

ಶ್ರೀ ವಿ.ಸುನೀಲ್ ಕುಮಾರ್ : ಮಾನ್ಯ ಅಧ್ಯಕ್ಷರೆ ನನ್ನ ಪ್ರಶ್ನೆಗೆ ಯಾವಾಗ ಉತ್ತರ ಬರುತ್ತದೆ ಸರ್?

ಅಧ್ಯಕ್ಷರು : ಮುಂದಿನ ವಾರ ಬರುತ್ತದೆ; ದಯಮಾಡಿ ಸಹಕರಿಸಿ.

ಶ್ರೀ ಶಿವರಾಜ ಸಜ್ಜನರ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಯಾವಾಗ ಉತ್ತರ ಕೊಡಿಸುತ್ತೀರಿ? ನಾನು 12 ದಿವಸಗಳ ಹಿಂದೆ ಕೊಟ್ಟಿದ್ದೇನೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆಗೆ ಎಂಟು ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ, ಮಾನ್ಯ ದಿನೇಶ್ ಗುಂಡೂರಾವ್‌ರವರೆ, ನಿಮ್ಮ ಪ್ರಶ್ನೆಗೆ ಉತ್ತರ ಬಂದಿದೆ ಕೇಳಿ.

ಚುಕ್ಕೆ ಗುರುತಿನ ಪ್ರಶ್ನೆ ಸಂ.: 4945

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಧರಣಿ, ಮುಷ್ಕರ, ಮೆರವಣಿಗೆ ಮುಂತಾದ ಕಾರಣದಿಂದ ಟ್ರಾಫಿಕ್ ಜಾಮ್ ಆಗುತ್ತದೆ. ಮೆರವಣಿಗೆಯಲ್ಲಿ ಪೊಲಿಟಿಕಲ್ ಪಾರ್ಟಿಯವರು ಬರುತ್ತಾರೆ. ಬಂದಮೇಲೆ 20 ಕಿ.ಮಿ. ದೂರದಲ್ಲಿ ಯಾವುದಾದರೂ ಒಂದು ಜಾಗವನ್ನು ಅದಕ್ಕೆ ನಿಗದಿಮಾಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಿನ್ನೆ ನಾನು ಒಂದು ಗಂಟೆಗಳ ಕಾಲ ಬಹಳ ಚರ್ಚೆ ಮಾಡಿದ್ದೇನೆ. ಇವತ್ತು ಮುಂಜಾನೆ ಕಾರ್ಪೋರೇಷನ್ ಕಮಿಷನರ್, ಬಿಡಿಎ ಕಮಿಷನರ್, ಅರ್ಬನ್ ಡೆವಲಪ್‌ಮೆಂಟ್ ಸೆಕ್ರೆಟರಿ, ನಾವೆಲ್ಲಾ ಕುಳಿತು, we have taken a decision at about 10.45 a.m. ಅದಾದ ಮೇಲೆ ಉತ್ತರ ಕಳುಹಿಸುವುದರಲ್ಲಿ ತಡವಾಗುತ್ತದೆ. ಅವರು ಉತ್ತರ ಕೇಳುವುದೇನೆಂದರೆ, ಈಗ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಹಂತದಲ್ಲೂ ಐದು ಸಾವಿರ, ಎರಡು ಸಾವಿರ, ಹತ್ತು ಸಾವಿರ, ಇಪ್ಪತ್ತು ಸಾವಿರ ಜನರ ಸಮೂಹ ಪ್ರತಿಭಟನೆಯನ್ನು ಮಾಡುತ್ತಾರೆ. ಪ್ರತಿಭಟನೆಯ ಕಾಲದಲ್ಲಿ ಸಮಸ್ತ ಬೆಂಗಳೂರಿನ ಜನತೆಗೆ ಇದರಿಂದ ತೊಂದರೆಯಾಗುತ್ತದೆ. ಎಲ್ಲಾದರೂ ಒಂದು 20 ಕಿ.ಮಿ. ವ್ಯಾಪ್ತಿಯಲ್ಲಿ ಇದಕ್ಕಾಗಿ ಜಾಗ ನಿಗದಿ ಮಾಡಬೇಕೆಂದು ಹೇಳಿದರು. 20 ಕಿ.ಮಿ. ದೂರದಲ್ಲಿ ಜಾಗವನ್ನು ನಿಗದಿ ಮಾಡಿದರೆ ಅದು ವ್ಯವಹಾರಿಕವಾಗಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ನಮ್ಮ ಊರಿನಲ್ಲೇ ಮಾಡಿಬಿಡುತ್ತೇವೆ ಬಿಡಿ, ಕ್ಯಾಪಿಟಲ್‌ಅನ್ನು 200 ಕಿ.ಮಿ. 300 ಕಿ.ಮಿ. ದೂರಕ್ಕೆ ಶಿಫ್ಟ್ ಮಾಡಿಬಿಡಿ ರಗಳೆ ಇರುವುದಿಲ್ಲ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ನಾನು ಅವರು ಕೇಳಿರುವ ಪ್ರಶ್ನೆ ಎಲ್ಲಾ ಓದಿದ್ದೇನೆ. ಹಿಂದೆ ಕಬ್ಬನ್‌ಪಾರ್ಕ್‌ನಲ್ಲಿ ಮಾಡಲಾಗುತ್ತಿತ್ತು. ಅಲ್ಲಿ ಮಾಡತಕ್ಕಂಥ ಕಾಲದಲ್ಲಿ ಹೈಕೋರ್ಟ್ ಒಂದು ಆದೇಶ ಕೊಟ್ಟು ಕಬ್ಬನ್ ಪಾರ್ಕ್‌ನಲ್ಲೂ ಕೂಡ ಯಾವ ಸಭೆ ನಡೆಯಬಾರದು, ಇದು ಮಲ್ಲಿಕಾರ್ಜುನ ಖರ್ಗೆಯವರಿಗೂ ಗೊತ್ತು, ನಾವು ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ

ಮಾಡುತ್ತಿದ್ದೆವು. ಅಲ್ಲಿಯೂ ಕೂಡ ಮಾಡಬಾರದೆಂದು ಕೋರ್ಟ್ ಅಬ್ಜೆಕ್ಷನ್, ಈಗ ಎಲ್ಲಿ ಮಾಡಬೇಕು? ಮೊದಲು ಚಿಕ್ಕಲಾಲ್‌ಬಾಗ್‌ನಲ್ಲಿ ಆಗುತ್ತಿತ್ತು. ಈಗ ಅಲ್ಲಿಯೂ ಕೂಡ ಸ್ಥಳವಿಲ್ಲ. ನಾವೇನು ಮಾಡಿದ್ದೇವೆಂದರೆ ಹಳೆ ಜೈಲ್ ಇತ್ತಲ್ಲಾ, ಅಲ್ಲಿ ಕಾರ್ಪೊರೇಷನ್‌ನ ಒಂದು ಗಾರ್ಡನ್ ಮಾಡತಕ್ಕಂಥ ರೀತಿಯಲ್ಲಿ ಮಾಡುತ್ತಿದ್ದೇವೆ. Already they have prepared a garden. ನಾವೇನು ಹೇಳಿದ್ದೇವೆಂದರೆ, ಗಾರ್ಡನ್ ಮಾಡಿ, ಇವತ್ತು 22 ಎಕರೆ ಜಮೀನು ಇದೆ. 6 ಎಕರೆ ಜಮೀನಿನಲ್ಲಿ ಕಾರ್ ಪಾರ್ಕಿಂಗ್ ಮತ್ತು 50 ಸಾವಿರ ಜನರು ಬಂದು ಪ್ರತಿಭಟನೆ ಮಾಡತಕ್ಕಂಥ ಜಾಗ. ಇನ್ನು ಒಂದು ಲಕ್ಷಕ್ಕೂ ಮೀರಿ ಜನರು ಬಂದರೆ ಪ್ಯಾಲೇಸ್ ಬೇರೆ ಕಡೆ ಇದೆ; Today we have taken a decision.

ಸಭಾದ್ಯಕ್ಷರೆ, ಇವತ್ತಿನ ಮಾನ್ಯ ದಿನೇಶ್ ಗುಂಡೂರಾವ್‌ರವರ ಪ್ರಶ್ನೆಗೆ ಇವತ್ತು ಹಿಂದಿನ ಸೆಂಟ್ರಲ್ ಜೈಲ್ ಜಾಗದಲ್ಲಿ ಮಾಡಬೇಕೆಂದಿರುವ ಒಂದು ಗಾರ್ಡನ್‌ನಲ್ಲಿ 6 ಎಕರೆ ಜಮೀನನ್ನು ಎಲ್ಲಾ ರಾಜಕೀಯ ಪಕ್ಷಗಳ ಪ್ರತಿಭಟನೆ, ಧರಣಿ ಮಾಡುವುದಕ್ಕೆ ಕೊಡಬೇಕೆನ್ನುವ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದರಿಂದ ಟ್ರಾಫಿಕ್ ಅನಾಹುತವೇನೂ ಆಗುವುದಿಲ್ಲ. ಪರ್ಮನೆಂಟ್ ಆಗಿ ಇದಕ್ಕೆ ಪರಿಹಾರ ಕಂಡುಹಿಡಿಯತಕ್ಕಂಥ ರೀತಿಯಲ್ಲಿ today we have taken a decision ಅದಕ್ಕೆ ಉತ್ತರ ಬರುವುದಕ್ಕೆ ತಡವಾಗಿರಬಹುದು. ಮಾನ್ಯ ದಿನೇಶ್ ಗುಂಡೂರಾವ್‌ರವರು ಕೇಳಿದ ಪ್ರಶ್ನೆಗೆ ಇವತ್ತು ತಮ್ಮ ಮುಖಾಂತರ ಉತ್ತರವನ್ನು ಕೊಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಅದ್ಯಕ್ಷರೆ, ಇದನ್ನು ನಾವು ಸ್ವಾಗತ ಮಾಡುತ್ತೇವೆ. ಏಕೆಂದರೆ ಬರೀ ಪ್ರತಿಭಟನೆ, ಹೋರಾಟವೆಂದಲ್ಲ, ಯಾವುದೇ ಕಾರ್ಯಕ್ರಮವನ್ನು ಸಾರ್ವಜನಿಕವಾಗಿ ಮಾಡಬೇಕಾದರೂ ಕೂಡ ಇದೊಂದು ಒಳ್ಳೆಯ ಜಾಗವನ್ನು ಅದಕ್ಕಾಗಿ ಮಾಡಿಕೊಟ್ಟಿದ್ದೀರಿ, ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಆದರೆ ಪ್ರಶ್ನೆ ಏನೆಂದರೆ, ಈ ಪೊಲೀಸ್ ಅಧಿಕಾರಿಗಳ ಕಿರುಕುಳದಿಂದ ಟ್ರಾಫಿಕ್ ಮತ್ತೊಂದು ರೀತಿಯಲ್ಲಿ ಗೊಂದಲವಾಗದ ರೀತಿಯಲ್ಲಿ, ಈ ಪಾರ್ಕ್ ಮಾಡಬೇಕಾದರೆ ಈ ಸಭೆಗಳಿಗೆ ಅಡ್ಡಿ ಆತಂಕವಾಗದ ರೀತಿಯಲ್ಲಿ ಏನಾದರೂ ಈಗಲೇ ವ್ಯವಸ್ಥೆ ಮಾಡಿದರೆ

ಅಥವಾ ಬೆಂಗಳೂರು ಸುತ್ತಮುತ್ತಲಿನಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಪಾರ್ಕ್ ಇದೆ. ಇದನ್ನು ಸಂಪೂರ್ಣ ಸಾರ್ವಜನಿಕ ಕಾರ್ಯಕ್ರಮಗಳಿಗೆ ಮೀಸಲಿಟ್ಟರೆ ಬರಿ ಹೋರಾಟ, ಸತ್ಯಾಗ್ರಹ ಚಳುವಳಿಯಂತಲ್ಲ, ಯಾವುದೇ ಸಾರ್ವಜನಿಕ ಸಮಾರಂಭ ಮಾಡುವುದಕ್ಕೆ ಅನುಕೂಲವಾಗುತ್ತದೆ. ಪಾರ್ಕ್ ಮಾಡುವುದನ್ನು ಕೈಬಿಟ್ಟು ಸಂಪೂರ್ಣವಾಗಿ ಇದನ್ನು ಅದಕ್ಕಾಗಿ ಉಪಯೋಗ ಮಾಡಿಕೊಂಡರೆ ಬಹಳ ಅನುಕೂಲವಾಗುತ್ತದೆನ್ನುವುದು ನನ್ನ ಅನಿಸಿಕೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರೇಸ್‌ಕೋರ್ಸ್ ಅನ್ನು ಬದಲಾವಣೆ ಮಾಡುವ ಒಂದು ಸೂಚನೆ ಸರ್ಕಾರದ ಮುಂದಿದೆ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಮ್ಮಲ್ಲಿ ಈಗಾಗಲೇ ಗೌರ್ನಮೆಂಟ್ ಆರ್ಟ್ಸ್ ಕಾಲೇಜ್ ಮೈದಾನವಿದೆ. ಅಲ್ಲಿ ಕೂಡ ಸಭೆಗಳಾಗುತ್ತವೆ. ಜಾಗವಿಲ್ಲವೆಂದು ನಾವು ಹೇಳುವುದಿಲ್ಲ. ಆದರೆ ಇವತ್ತು ಬಹಳ ಮುಖ್ಯವಾಗಿ ಆಗುವುದು ಜನರು ಬಂದಾಗ ಎಲ್ಲಾ ಕಡೆ ಟ್ರಾಫಿಕ್‌ಜಾಮ್ ಆಗುತ್ತದೆ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಲಕ್ಷಾಂತರ ಜನರು ಓಡಾಡುತ್ತಾರೆ. ಸಣ್ಣ ಸಣ್ಣ ವಿಚಾರಕ್ಕೂ ಕೂಡ ಟ್ರಾಫಿಕ್ ಜಾಮ್ ಆಗುತ್ತದೆ. ಒಂದು ಹತ್ತು ನಿಮಿಷ ನಿಲ್ಲಿಸಿದರೂ ಕೂಡ ಇಡೀ ಎರಡು ಮೂರು ಕಿ.ಮಿ. ಸುತ್ತ ಮತ್ತೆಲ್ಲಾ ತೊಂದರೆ ಯಾಗುತ್ತದೆ. ಇದರಿಂದ ಆಸ್ಪತ್ರೆಗೆ ಹೋಗುವವರಿರಬಹುದು. ಕೆಲಸಕ್ಕೆ ಹೋಗುವವರಿರಬಹುದು, ಬೇರೆಡೆಗೆ ಹೋಗುವವರಿರಬಹುದು, ಯಾವುದೇ ಎಮರ್ಜೆನ್ಸಿ ಇದ್ದರೂ ಕೂಡ ಬೆಂಗಳೂರಿನಲ್ಲಿ ತುಂಬಾ ತೊಂದರೆಯಾಗುತ್ತದೆ. ಆದರೆ ನಮ್ಮ ಉದ್ದೇಶವೇನೆಂದರೆ, 20 ಕಿ.ಮಿ. ವ್ಯಾಪ್ತಿಯಲ್ಲಿ ಎಂದು ಹೇಳಿರುವುದು ದೂರವಾಗುತ್ತದೆ. ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಯಾವುದೋ ಒಂದು ಮೈದಾನದಲ್ಲಿ ಮಾಡಿದರೆ ಸ್ವಲ್ಪ ಅನುಕೂಲವಾಗುತ್ತದೆ. ಇಲ್ಲವಾದರೆ ಏನಾಗುತ್ತದೆಂದರೆ ಈಗಲೆ ಆರ್ಟ್ಸ್ ಕಾಲೇಜ್ ಮೈದಾನವಿದೆ. ಸೆಂಟ್ರಲ್ ಕಾಲೇಜಿನಲ್ಲಿ ಮಾಡಿದರೂ ಕೂಡ, ಟ್ರಾಫಿಕ್ ವಿಚಾರದಲ್ಲಿ ಸಮಸ್ಯೆ ಬಗೆಹರಿದಂತಾಗುವುದಿಲ್ಲ; ಆದುದರಿಂದ ದಯವಿಟ್ಟು ಆ ಬಗ್ಗೆ ಪುನರ್‌ಪರಿಶೀಲನೆ ಮಾಡಿ, ಏಕೆಂದರೆ, ಮೆಜೆಸ್ಟಿಕ್, ಕೆ.ಜಿ. ರಸ್ತೆ, ಸುತ್ತಮುತ್ತ ಹೈಕೋರ್ಟ್ ಎಲ್ಲಾ ಇರುವುದರಿಂದ ತುಂಬಾ ಜನರಿಗೆ

ತೊಂದರೆಯಾಗುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ನಿರ್ಣಯ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ರಾಜಧಾನಿಯನ್ನು ಬದಲಾವಣೆ ಮಾಡಿ, ರಾಜಧಾನಿ ಬೆಂಗಳೂರಿಗೆ ಬೇಡ ನಮ್ಮ ಊರಿಗೆ ಕೊಟ್ಟುಬಿಡಿ ಅಲ್ಲೇ ಮಾಡಿಕೊಳ್ಳುತ್ತೇವೆ.

ಶ್ರೀ ದಿನೇಶ್ ಗುಂಡೂರಾವ್ : ಪ್ರತಿಭಟನೆ ಮಾಡುವುದಕ್ಕೆ ವಿಧಾನಸೌಧದ ಪಕ್ಕದಲ್ಲಿರುವ ಜಾಗವೇ ಬೇಕೆಂದೇನೂ ಇಲ್ಲ, ಪ್ರತಿಭಟನೆಯನ್ನು ಎಲ್ಲಿ ಬೇಕಾದರೂ ಮಾಡಬಹುದು.

(ಗೊಂದಲ)

ಅಧ್ಯಕ್ಷರು : ನೀವು ಹಿರಿಯ ಸದಸ್ಯರಿದ್ದೀರಿ ಈ ರೀತಿ ಮಾತನಾಡುವುದು ಸರಿಯಲ್ಲ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ದಿನೇಶ್ ಗುಂಡೂರಾವ್‌ರವರು ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ, ನೀವು ಮಧ್ಯದಲ್ಲಿ ಮಾತನಾಡಿದರೆ ಹೇಗೆ? ಅದಕ್ಕೆ ಉತ್ತರ ಕೊಡುತ್ತಾರೆ. ಅನಂತರ ನೀವು ಪ್ರಶ್ನೆಯನ್ನು ಕೇಳಿ ಸ್ವಾಮಿ, ಏನು ಹೀಗೆ ನಿಂತುಕೊಂಡುಬಿಟ್ಟರೆ ಅವರ ಅಭಿಪ್ರಾಯವನ್ನು ಅವರು ಹೇಳಲಿ ಬಿಡಿ.

ಶ್ರೀ ದಿನೇಶ್ ಗುಂಡೂರಾವ್ : ಸೆಂಟ್ರಲ್ ಜೈಲ್ ಇದ್ದ ಜಾಗದಲ್ಲಿ ಉದ್ಯಾನವನವಾಗಬೇಕು, ಮಾನ್ಯ ಯಡಿಯೂರಪ್ಪನವರು ಹೇಳಿದರು. ಆದರೆ ಅಲ್ಲಿ ಉದ್ಯಾನವನವಾಗಬೇಕು. ದಯವಿಟ್ಟು ಅದನ್ನು ಕ್ಯಾನ್ಸಲ್ ಮಾಡಬಾರದು, ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪುನರ್‌ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಮುಖ್ಯಮಂತ್ರಿಗಳು ಯೋಚನೆ ಮಾಡಿ ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿರುವುದರಿಂದ ಈ ಕಡೆ ಕುಳಿತಿರುವ ನಮ್ಮ ಸಲಹೆ ಏನೆಂದರೆ, ಯಾವುದೇ ಹೋರಾಟ ಚಳುವಳಿ ಮಾಡಿದರೆ ಬೆಂಗಳೂರಿನಿಂದ 20 ಕಿ.ಮಿ. ದೂರದಲ್ಲಿ ಮಾಡಿ ಮುಖ್ಯಮಂತ್ರಿಗಳನ್ನು, ನಿಮ್ಮನ್ನು ಭೇಟಿ ಮಾಡುವುದು ಆಗದಿರುವ ವಿಷಯ; ಯಾರೇನೂ ಶಾಶ್ವತವಾಗಿ ಅಧಿಕಾರದಲ್ಲಿರುವುದಿಲ್ಲ. ಯಾವುದೇ ಸಂದರ್ಭದಲ್ಲಿ ಕೇವಲ ಹೋರಾಟ, ಸತ್ಯಾಗ್ರಹ, ಚಳುವಳಿ ಅಷ್ಟೇ ಅಲ್ಲ ಸಾರ್ವಜನಿಕ ಸಮಾರಂಭಕ್ಕೂ ಸಹ ಎಲ್ಲೂ ಇವತ್ತು ಸರ್ಕಾರಿ ಜಾಗಗಳು

ಇಲ್ಲ. ನೀವೇನು ಯೋಚನೆ ಮಾಡಿ ಸ್ಥಳವನ್ನು ನಿಗದಿ ಮಾಡಿದ್ದೀರಿ ಅದು ಸರಿ ಇದೆ, ಪಾರ್ಕ್, ಸಭೆ ಸಮಾರಂಭಕ್ಕೆ ಅಡ್ಡಿಯಾಗದ ರೀತಿಯಲ್ಲಿ ಒಂದು ಪ್ಲಾನ್ ಮಾಡಿದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಸತ್ಯಾಗ್ರಹ ಸ್ಥಳ ಎಂದು ಹೆಸರನ್ನು ಇಟ್ಟೇಬಿಡಿ, ಯಾವುದೇ ಸತ್ಯಾಗ್ರಹ ನಡೆದರೂ ಅಲ್ಲೇ ನಡೆಯಬೇಕು, ಅದು ಸತ್ಯಾಗ್ರಹ ಸ್ಥಳವೆಂದು ಸರ್ಕಾರ ಗಂಭೀರವಾಗಿ ತೀರ್ಮಾನ ಮಾಡಿಯೇ ಬಿಡಿ.

ಶ್ರೀ ಆರಗ ಜ್ಞಾನೇಂದ್ರ : ಇದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಮೊಕದ್ದಮೆ ಇದೆ. ಸರ್ಕಾರಕ್ಕೆ ಬೆಂಗಳೂರು ಮಹಾನಗರ ಪಾಲಿಕೆಗೆ ನೋಟೀಸ್ ಕೊಟ್ಟಿದ್ದಾರೆ. ಇವತ್ತು ಪತ್ರಿಕೆನಲ್ಲೂ ಕೂಡ ಬಂದಿದೆ. ಟ್ರಾಫಿಕ್ ಜಾಮ್ ಆಗುತ್ತದೆಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಕಲಾಗಿದೆ. ಅದಕ್ಕೂ ಕೂಡ ನೀವು ಸರಿಯಾದ ಉತ್ತರವನ್ನು ಹೈಕೋರ್ಟ್‌ಗೆ ಕಳುಹಿಸದಿದ್ದರೆ ತಾಪತ್ರಯವಾಗುತ್ತದೆ.

ಶ್ರೀ ಧರ್ಮಸಿಂಗ್ : ಮಾನ್ಯ ದಿನೇಶ್ ಗುಂಡೂರಾವ್‌ರವರು ಗಾಂಧೀನಗರದ ಶಾಸಕರಾಗಿದ್ದಾರೆ. ಅವರೇನು ಹೇಳುತ್ತಾರೆಂದರೆ, ಸೆಂಟ್ರಲ್ ಕಾಲೇಜಿನಲ್ಲಿ ಬೇರೆ ಕಡೆಗೆ ಮಾಡುವುದರಲ್ಲಿ ಅಭ್ಯಂತರವಿಲ್ಲ. ಆದರೆ ಪ್ರೊಸೆಷನ್ ಬರುವ ರೀತಿಯಲ್ಲಿ ಟ್ರಾಫಿಕ್‌ಜಾಮ್ ಆಗಿ ಮತ್ತೆ ಕೂಡ ತೊಂದರೆಯಾಗುತ್ತದೆ. ನೀವು ಇಲ್ಲಿ ಪಾರ್ಕ್‌ನಲ್ಲಿ ಮಾಡಿದರೂ ಕೂಡ ತೊಂದರೆಯಾಗುತ್ತದೆ. 20 ಕಿ.ಮಿ. ದೂರದಲ್ಲಿ ಮಾಡಿದರೆ ಸರಿಹೋಗುತ್ತದೆ, ಪ್ರೊಜೆಕ್ಟಡ್ ಪಾಪ್ಯುಲೇಶನ್ ಗಮನದಲ್ಲಿಟ್ಟು ಕೊಂಡು ಹೆಚ್ಚು ಜನರು ಬರುತ್ತಾರೆ ಎಂಬುದನ್ನು ಗಮನಕ್ಕೆ ತರುವುದು ಅವರ ಉದ್ದೇಶ. ಅವರು ಕೇಳಿದ ಪ್ರಶ್ನೆಗೆ ನಿನ್ನೆ ಎರಡು ಗಂಟೆಗಳ ಕಾಲ ಅಧಿಕಾರಿಗಳೊಡನೆ ಚರ್ಚೆ ಮಾಡಿದ್ದೇನೆ. ಟ್ರಾಫಿಕ್ ಕಂಜೆಕ್ಷನ್ ಏನಾಗುತ್ತಿದೆ ಆ ಬಗ್ಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬೇರೆ ಪೊಲಿಟಿಕಲ್ ಪಾರ್ಟಿಗಳು ಬಂದು, ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳಿಗಾಗಲಿ, ಮಂತ್ರಿಗಳಿಗಾಗಲಿ, ಮನವಿಯನ್ನು ಸಲ್ಲಿಸುವುದೇನಿದೆ, ಅದಕ್ಕೆ ತೊಂದರೆ ಆಗಬಹುದೆನ್ನುವ ರೀತಿಯಲ್ಲಿ, ಇವತ್ತು ಬಾಂಬೆನಲ್ಲಿ ಶಿವಾಜಿ ಪಾರ್ಕ್ ಇದೆ ಬೇರೆ ಬೇರೆ ಕಡೆಯಲ್ಲೂ ಕೂಡ ನಿಗದಿಪಡಿಸಿದ್ದಾರೆ. ಆ ಪ್ರಕಾರ 22 ಎಕರೆ ಜಮೀನಿನಲ್ಲಿ

ಕಾರ್ಪೊರೇಷನ್‌ರವರು ಗಾರ್ಡನ್ ಮಾಡುವ ಉದ್ದೇಶ ಇದೆ. ಅವರ ಜೊತೆಯಲ್ಲಿ ಮಾತನಾಡಿ ಆರು ಎಕರೆ ಬಿಡುತ್ತಾ ಇದ್ದಾರೆ. ಆ ಆರು ಎಕರೆಯಲ್ಲಿ ಮಾಡಬೇಕೆಂದು ನಿರ್ಣಯ ಇದೆ. ಅವರೂ ಕೂಡ ಒಪ್ಪುತ್ತಾರೆ. 20 ಕಿ.ಮಿ. ದೂರದಲ್ಲಾದರೆ ಯಾರೂ ಒಪ್ಪುವುದಿಲ್ಲವೆಂಬುದು ಅವರಿಗೂ ಗೊತ್ತಿದೆ.

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು :

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 12.7.2005ರ 28ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 173 ಪ್ರಶ್ನೆಗಳ ಪೈಕಿ 113 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ (ಅನುಬಂಧ–1).

ಅಧ್ಯಕ್ಷರು : ಮಂಡಿಸಲಾಗಿದೆ.

2. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :

ವಿಷಯ : ಕಳಸಾ ಬಂಡೂರಿ ನಾಲೆಗೆ ಮಲಪ್ರಭಾ ನದಿ ನೀರು ಕೊಡುವ ಬಗ್ಗೆ ನರಗುಂದ–ನವಲಗುಂದದಲ್ಲಿ ಬಗ್ಗೆ ಹೋರಾಟ ನಡೆಯುತ್ತಿರುವುದರ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ ನಾನೊಂದು ನಿಲುವಳಿ ಸೂಚನೆಯನ್ನು ನಿಮಗೆ ಕಳುಹಿಸಿಕೊಟ್ಟಿದ್ದೇನೆ. ಬಹಳ ದೊಡ್ಡ ಹೋರಾಟ ಇವತ್ತು ನರಗುಂದ ನವಲಗುಂದದಲ್ಲಿ ನಡೆಯುತ್ತಿದೆ. ಕಳಸಾ ಬಂಡೂರಿ ನಾಲಾ ಯೋಜನೆ ಒಂದಲ್ಲ ಒಂದು ಕಾರಣಕ್ಕೆ ಮಹದಾಯಿ ಕಣಿವೆಯಿಂದ ಕಳಸಾ ಬಂಡೂರಿ ನಾಲೆಗೇನು ಮಲಪ್ರಭಾ ನದಿ ಮಾರ್ಗವಾಗಿ 8 ಟಿ.ಎಂ.ಸಿ. ನೀರು ಕೊಡಬೇಕಾಗಿತ್ತೋ ಈ ಬಗ್ಗೆ ಅನೇಕ ವರ್ಷಗಳಿಂದ ಹೋರಾಟಗಳು ನಡೆಯುತ್ತಿವೆ. ಇವತ್ತು ನಾನು ಮುಖ್ಯಮಂತ್ರಿಗಳು ಹಾಗೂ ನೀರಾವರಿ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ಕೇಂದ್ರ ಸರ್ಕಾರ ಗೋವಾ ಸರ್ಕಾರ ಹಾಗೂ ಕರ್ನಾಟಕ ಸರ್ಕಾರ ಒಂದೇ ಪಕ್ಷದ ಸರ್ಕಾರ ಹೊಂದಿರುವಂತಹ ಸಂದರ್ಭ. ಒಂದಲ್ಲ ಒಂದು ಕಾರಣಕ್ಕೆ ಇದಕ್ಕೆ ರಾಜಕೀಯ ಬೆರೆತು ಇದುವರೆವಿಗೂ ತೀರ್ಮಾನವಾಗದೇನೇ ಯೋಜನೆ ಆಗಲಿಲ್ಲ. ಕಳೆದ 60 ದಿನಗಳಿಂದ ನರಗುಂದದಲ್ಲಿ ಪ್ರತಿನಿತ್ಯ ಎರಡು ಊರಿನ